


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಉಹುದ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–01–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ إِيَّاكَ نَعْبُدُ وَإِيَّاكَ نَسْتَعِيْنُ ـ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರಿಗೆ ಯುದ್ಧದಲ್ಲಿ ಉಂಟಾದ ಗಾಯದ ಬಗ್ಗೆಗಿನ ವಿವರಣೆ ಕೆಲವು ವರದಿಗಳಲ್ಲಿ ಇವೆ. ಹಝ್ರತ್ ಇಬ್ನು ಅಬ್ಬಾಸ್(ರ)ರ ವರದಿಯ ಪ್ರಕಾರ ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅಲ್ಲಾಹನ ಮಾರ್ಗದಲ್ಲಿ ಅಲ್ಲಾಹನ ಪ್ರವಾದಿ ಯಾವವನ್ನು ವಧಿಸುತ್ತಾರೋ ಆತನ ಮೇಲೆ ಅಲ್ಲಾಹನ ಕೋಪ ಕಠಿಣವಾಗಿರುತ್ತದೆ. ಅದೇ ರೀತಿ ಯಾವ ಸಮುದಾಯ ಅಲ್ಲಾಹನ ಪ್ರವಾದಿಯ ಮುಖವನ್ನು ರಕ್ತಸಿಕ್ತಗೊಳಿಸಿದರೋ ಆ ಸಮುದಾಯದ ಮೇಲೆ ಅಲ್ಲಾಹನ ಕೋಪ ತೀವ್ರತರದ್ದಾಗಿರುತ್ತದೆ.

ತಬ್‌ರಾನಿಯ ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಗಾಯಾಳುವಾದಾಗ ಹೀಗೆ ಹೇಳಿದರು: ಯಾವ ಸಮುದಾಯ ಅಲ್ಲಾಹನ ಪೈಗಂಬರರ ಅನುಗ್ರಹೀತ ಮುಖವನ್ನು ಗಾಯಗೊಳಿಸಿತೋ ಅದರ ಮೇಲೆ ಅಲ್ಲಾಹನ ಕೋಪ ಅತಿ ಕಠಿಣವಾಗಿರುತ್ತದೆ. ಹೇ ಅಲ್ಲಾಹ್, ನನ್ನ ಸಮುದಾಯವನ್ನು ಕ್ಷಮಿಸು, ಏಕೆಂದರೆ ಅವರಿಗೆ ಅರಿವಿಲ್ಲ. ಒಟ್ಟಿನಲ್ಲಿ ಅಲ್ಲಾಹನ ಬಣ್ಣದಲ್ಲಿ ಪೂರ್ಣವಾಗಿ ಬಣ್ಣಿಸಲ್ಪಟ್ಟಿದ್ದ ಹಝ್ರತ್ ಪೈಗಂಬರ್(ಸ)ರ ಕಾರುಣ್ಯವು ಗಾಯಗೊಂಡು ರಕ್ತ ಹರಿಯುತ್ತಿದ್ದ ಸ್ಥಿತಿಯಲ್ಲೂ ಉಕ್ಕಿ ಬಂತು. ಹಝ್ರತ್ ಪೈಗಂಬರ್(ಸ) ಅನಂತರ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಅವರು ಅರಿವಿಲ್ಲದ ಮತ್ತು ಮೂರ್ಖತನದ ಕಾರಣದಿಂದ ಈ ದೌರ್ಜನ್ಯವನ್ನು ಮಾಡುತ್ತಿದ್ದಾರೆ. ಅವರನ್ನು ಕ್ಷಮಿಸು. ಅವರ ತಪ್ಪುಗಳ ಕಾರಣದಿಂದ ಅವರ ಮೇಲೆ ಶಿಕ್ಷೆ ಇಳಿಸಬೇಡ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದ್**. ಎಂತಹ ವಾತ್ಸಲ್ಯ ಮತ್ತು ಕಾರುಣ್ಯದ ಪ್ರಕಟಣೆಯಾಗಿದೆ!

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರನ್ನು ನಾನು ಈಗಲೂ ನೋಡುತ್ತಿದ್ದಂತೆ ನನಗೆ ಭಾಸವಾಗುತ್ತಿದೆ. ಪ್ರವಾದಿಗಳಲ್ಲಿ ಒಬ್ಬ ಪ್ರವಾದಿಯ ಸ್ಥಿತಿಯನ್ನು ಒಮ್ಮೆ ಹಝ್ರತ್ ಪೈಗಂಬರ್(ಸ) ನಮಗೆ ಹೇಳಿ ಕೊಡುತ್ತಿದ್ದರು. ಅವರನ್ನು ಅವರ ಸಮುದಾಯ ಹೊಡೆದು ರಕ್ತಸಿಕ್ತಗೊಳಿಸಿದ್ದರು. ಅವರು ತಮ್ಮ ಮುಖದಿಂದ ರಕ್ತವನ್ನು ಒರೆಸುತ್ತಾ ಹೀಗೆ ಹೇಳುತ್ತಿದ್ದರು: ಹೇ ಅಲ್ಲಾಹ್, ನನ್ನ ಸಮುದಾಯವನ್ನು ಕ್ಷಮಿಸು, ಏಕೆಂದರೆ ಅವರಿಗೆ ತಿಳುವಳಿಕೆಯಿಲ್ಲ.

ಈ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸಹ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ವಿವರಣೆ ನೀಡಿದ್ದಾರೆ: ಕಣಿವೆಗೆ ತಲುಪಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರ ಸಹಾಯದಿಂದ ತನ್ನ ಗಾಯವನ್ನು ತೊಳೆದರು. ಹಝ್ರತ್ ಪೈಗಂಬರ್(ಸ)ರ ಮುಖಕ್ಕೆ ನುಗ್ಗಿಹೋಗಿದ್ದ ಎರಡು ಕಂಬಿಗಳನ್ನು ಅಬೂ ಉಬೈದ ಬಿನ್ ಜರ್‌ರಾಹ್(ರ) ಬಹಳ ಶ್ರಮಪಟ್ಟು ತನ್ನ ಹಲ್ಲುಗಳಿಂದ ಎಳೆಯುತ್ತಾ ಹೊರಗೆ ತೆಗೆದರು. ಈ ಪರಿಶ್ರಮದಲ್ಲಿ ಅವರ ಎರಡು ಹಲ್ಲುಗಳು ಕಿತ್ತುಹೋದುವು. ಆ ವೇಳೆ ಹಝ್ರತ್ ಪೈಗಂಬರ್(ಸ)ರ ಗಾಯದಿಂದ ಬಹಳ ರಕ್ತ ಹರಿಯುತ್ತಿತ್ತು. ಹಝ್ರತ್ ಪೈಗಂಬರ್(ಸ) ಆ ರಕ್ತವನ್ನು ನೋಡಿ ಖೇದದಿಂದ ಹೀಗೆ ಹೇಳುತ್ತಿದ್ದರು: **ಕೈಫ ಯಫ್‌ಲಹು ಕೌಮುನ್ ಖ್ಹಝ್ಬೂ ವಜ್‌ಹ ನಬಿಯ್ಯಿಹಿಮ್ ಬಿದ್ದಮಿ ವಹುವ ಯದ್‌ಊಹುಮ್ ಇಲಾ ರಬ್ಬಿಹಿಂ**. ಅರ್ಥ: ಅಲ್ಲಾಹನ ಕಡೆಗೆ ಕರೆಯುವ ಪ್ರವಾದಿಯ ಮುಖವನ್ನು ರಕ್ತದಿಂದ ತುಂಬಿಸಿದ ಸಮುದಾಯ ಮೋಕ್ಷ ಹೊಂದಲು ಹೇಗೆ ಸಾಧ್ಯ? ಅನಂತರ ಹಝ್ರತ್ ಪೈಗಂಬರ್(ಸ) ಸ್ವಲ್ಪ ಸಮಯ ಸುಮ್ಮನಿದ್ದರು ಮತ್ತು ಹೀಗೆ ಹೇಳಿದರು: **ಅಲ್ಲಾಹುಮ್ಮಗ್ಫಿರ್ ಲಿಕೌಮೀ ಫ ಇನ್ನಹುಮ್ ಲಾ ಯಅ್‌ಲಮೂನ್**. ಅರ್ಥ: ಹೇ ನನ್ನ ಅಲ್ಲಾಹ್, ನೀನು ಈ ಜನರನ್ನು ಕ್ಷಮಿಸು, ಏಕೆಂದರೆ ಅವರಿಂದ ಈ ತಪ್ಪು ಮೂಢತೆ ಮತ್ತು ಅರಿವಿಲ್ಲದ ಕಾರಣದಿಂದ ನಡೆದಿದೆ. ಇದೇ ಸಂದರ್ಭದಲ್ಲಿ ಪವಿತ್ರ ಖುರ್‌ಆನಿನ ಈ ವಚನ ಅವತೀರ್ಣವಾಯಿತು ಎಂದು ವರದಿಯಲ್ಲಿ ಬಂದಿದೆ: **ಲೈಸ ಲಕ ಮಿನಲ್ ಅಮ್‌ರಿ ಶೈಉನ್**. ಎಂದರೆ ಶಿಕ್ಷೆ ಮತ್ತು ಕ್ಷಮೆಯ ವಿಷಯ ಅಲ್ಲಾಹನಿಗೆ ಬಿಟ್ಟದ್ದು. ಅದರೊಂದಿಗೆ ನಿಮಗೆ ಯಾವುದೇ ಸಂಬಂಧವಿಲ್ಲ. ಅವನು ಬಯಸಿದವನನ್ನು ಕ್ಷಮಿಸುವನು ಮತ್ತು ಅವನು ಬಯಸಿದವನಿಗೆ ಶಿಕ್ಷೆ ನೀಡುವನು.

ಹಝ್ರತ್ ಪೈಗಂಬರ್(ಸ)ರ ಕುರಿತು ಭಯ ಹುಟ್ಟಿಸುವ ಈ ವಾರ್ತೆಗಳನ್ನು ಕೇಳಿ ಮದೀನದಿಂದ ಹೊರಟ ಹಝ್ರತ್ ಫಾತಿಮತುಝ್ಝುಹ್‌ರಾ ಸ್ವಲ್ಪ ಸಮಯದ ನಂತರ ಉಹುದ್ ಮೈದಾನಕ್ಕೆ ತಲುಪಿದರು. ಬಂದ ಕೂಡಲೇ ಹಝ್ರತ್ ಪೈಗಂಬರ್(ಸ)ರ ಗಾಯಗಳನ್ನು ತೊಳೆಯಲು ಶುರುಮಾಡಿದರು. ಆದರೆ ರಕ್ತ ಹರಿಯುವುದು ನಿಲ್ಲುತ್ತಿರಲಿಲ್ಲ. ಕೊನೆಗೆ ಹಝ್ರತ್ ಫಾತಿಮ(ರ) ಗೋಣಿಯ ಒಂದು ತುಂಡನ್ನು ಸುಟ್ಟು ಅದರ ಬೂದಿಯನ್ನು ಅವರ ಗಾಯಕ್ಕೆ ಕಟ್ಟಿದರು. ಆಗ ಅವರ ರಕ್ತ ಹೆಪ್ಪುಗಟ್ಟಿತು. ಇತರ ಮಹಿಳೆಯರು ಕೂಡ ಈ ಸಂದರ್ಭದಲ್ಲಿ ಗಾಯಾಳುಗಳಾದ ಸಹಾಬಿಯರ ಸೇವೆ ಮಾಡಿ ಪುಣ್ಯ ಗಳಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಹೀಗೆ ವಿವರಿಸುತ್ತಾರೆ: ಉಹುದ್ ಯುದ್ಧದ ವೇಳೆ ಒಂದು ಕಲ್ಲು ಹಝ್ರತ್ ಪೈಗಂಬರ್(ಸ)ರ ತಲೆಕವಚಕ್ಕೆ ತಗುಲಿತು ಮತ್ತು ಅದರ ತುಂಡುಗಳು ಅವರ ತಲೆಗೆ ನುಗ್ಗಿದ್ದುವು. ಸುತ್ತಮುತ್ತ ಹೋರಾಡುತ್ತಾ ಶಹೀದ್ ಆದ ಸಹಾಬಿಯರ ಮೃತದೇಹಗಳ ನಡುವೆ ಹಝ್ರತ್ ಪೈಗಂಬರ್(ಸ) ಪ್ರಜ್ಞೆ ತಪ್ಪಿ ಬಿದ್ದರು. ಅನಂತರ ಇನ್ನೂ ಕೆಲವು ಸಹಾಬಿಯರ ಮೃತದೇಹಗಳು ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ದೇಹದ ಮೇಲೆ ಬಂದು ಬಿದ್ದುವು. ಹಝ್ರತ್ ಪೈಗಂಬರ್(ಸ) ವಧಿಸಲ್ಪಟ್ಟರು ಎಂದು ಜನರು ಭಾವಿಸಿದರು. ಆದರೆ ಹಝ್ರತ್ ಪೈಗಂಬರ್(ಸ)ರನ್ನು ಹೊಂಡದಿಂದ ಹೊರಗೆ ತೆಗೆಯಲಾದಾಗ ಮತ್ತು ಹಝ್ರತ್ ಪೈಗಂಬರ್(ಸ)ರಿಗೆ ಪ್ರಜ್ಞೆ ಮರಳಿ ಬಂದಾಗ, ಶತ್ರುಗಳು ತನ್ನನ್ನು ಗಾಯಗೊಳಿಸಿದರು, ತನ್ನ ಹಲ್ಲನ್ನು ಮುರಿದಿರುವರು ಹಾಗೂ ತನ್ನ ಬಂಧುಗಳನ್ನು ಮತ್ತು ಮಿತ್ರರನ್ನು ಶಹೀದ್ ಮಾಡಿರುವರು ಎಂಬುದನ್ನು ಚಿಂತಿಸದೇ ಅವರು ಹೀಗೆ ದುಆ ಮಾಡಿದರು: **ರಬ್ಬಿಗ್ಫ಼ಿರ್ ಲಿಕೌಮೀ ಫ಼ ಇನ್ನಹುಮ್ ಲಾ ಯಅ್‌ಲಮೂನ್**. ಅರ್ಥ: ಹೇ ಪ್ರಭೂ, ಈ ಜನರು ನನ್ನ ಸ್ಥಾನವನ್ನು ಗುರುತಿಸಲಿಲ್ಲ. ಆದ್ದರಿಂದ ನೀನು ಅವರನ್ನು ಮನ್ನಿಸು ಮತ್ತು ಅವರ ಪಾಪಗಳನ್ನು ಕ್ಷಮಿಸು.

ಉಹುದ್ ಯುದ್ಧದಲ್ಲಿ ದೇವದೂತರು ಹಾಜರಾಗಿ ಹೋರಾಡಿದ್ದಾಗಿಯೂ ಪ್ರಸ್ತಾಪ ಬರುತ್ತದೆ. ಹಝ್ರತ್ ಸಅದ್ ಬಿನ್ ವಖಾಸ್(ರ) ವರದಿ ಮಾಡುತ್ತಾರೆ: ನಾನು ಉಹುದಿನ ದಿನದಂದು ಹಝ್ರತ್ ಪೈಗಂಬರ್(ಸ)ರ ಬಲ ಮತ್ತು ಎಡ ಭಾಗಗಳಲ್ಲಿ ಇಬ್ಬರು ವ್ಯಕ್ತಿಗಳನ್ನು ಕಂಡೆನು. ಅವರು ಬಿಳಿ ಉಡಿಗೆಯನ್ನು ಧರಿಸಿದ್ದರು. ಅವರು ಬಹಳ ಶಕ್ತವಾಗಿ ಹೋರಾಡುತ್ತಿದ್ದರು. ನಾನು ಅವರಿಬ್ಬರನ್ನೂ ಅದಕ್ಕಿಂತ ಮೊದಲು ಅಥವಾ ನಂತರ ನೋಡಿಲ್ಲ. ಅವರು ಜಿಬ್ರೀಲ್ ಮತ್ತು ಮೀಕಾಈಲ್ ಆಗಿದ್ದರು.

ಅಲ್ಲಾಮ ಬೈಹಖೀ ಉರ್‌ವರಿಂದ ವರದಿ ಮಾಡುತ್ತಾರೆ. ಸಹನೆ ಮತ್ತು ದೇವಭಕ್ತಿ ತೋರಿಸಿದರೆ ಐದು ಸಾವಿರ ದೇವದೂತರ ಮೂಲಕ ನಿರಂತರವಾಗಿ ಮುಸ್ಲಿಮರಿಗೆ ಸಹಾಯ ನೀಡುವೆನು ಎಂದು ಅಲ್ಲಾಹನು ವಾಗ್ದಾನ ಮಾಡಿದ್ದನು. ಅಲ್ಲಾಹನು ಹಾಗೆಯೇ ಮಾಡಿದ್ದನು. ಆದರೆ ಅವರು ಹಝ್ರತ್ ಪೈಗಂಬರ್(ಸ)ರ ಆದೇಶವನ್ನು ಪಾಲಿಸದೇ ಪಂಕ್ತಿಗಳನ್ನು ಬಿಟ್ಟಾಗ, ಬಿಲ್ಲುಗಾರರು ತಮ್ಮ ಜಾಗಗಳನ್ನು ಬಿಟ್ಟು ಲೌಕಿಕತೆಗೆ ಲಕ್ಷ್ಯ ನೀಡಿದಾಗ ಅವರಿಂದ ದೇವದೂತರ ಸಹಾಯವನ್ನು ಎತ್ತಲಾಯಿತು. ಅಲ್ಲಾಹನು ಈ ವಚನವನ್ನು ಅವತೀರ್ಣಗೊಳಿಸಿದನು: ನೀವು ಅಲ್ಲಾಹನ ಆದೇಶವನ್ನು ಪಾಲಿಸದೇ ಇದ್ದ ವೇಳೆ ಖಂಡಿತವಾಗಿಯೂ ಅಲ್ಲಾಹನು ನಿಮ್ಮೊಡನೆ ತನ್ನ ವಾಗ್ದಾನವನ್ನು ಸತ್ಯಪಡಿಸಿ ತೋರಿಸಿದನು. ಮುಹಮ್ಮದ್ ಬಿನ್ ಸಾಬಿತ್ ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ಉಹುದಿನ ದಿನ ಹೀಗೆ ಹೇಳಿದರು: ಹೇ ಮುಸ್‌ಅಬ್ ನೀನು ಮುಂದಕ್ಕೆ ಧಾವಿಸು. ಆಗ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಕೇಳಿದರು: ಹೇ ಅಲ್ಲಾಹನ ರಸೂಲರೇ, ಮುಸ್‌ಅಬ್ ಶಹೀದ್ ಆದರಲ್ಲವೇ? ಆಗ ಹಝ್ರತ್ ಪೈಗಂಬರ್(ಸ) ಉತ್ತರಿಸಿದರು: ಖಂಡಿತವಾಗಿಯೂ, ಆದರೆ ಒಬ್ಬ ದೇವದೂತ ಅವರ ಪ್ರತಿನಿಧಿಯಾಗಿ ಇರುವರು. ಮುಸ್‌ಅಬ್‌ರ ಹೆಸರನ್ನು ಆ ದೇವದೂತನಿಗೆ ನೀಡಲಾಗಿದೆ.

ಸಅದ್ ಬಿನ್ ಅಬೀ ವಖಾಸ್(ರ)ರಿಂದ ಅಲ್ಲಾಮ ಇಬ್ನು ಅಸಾಕಿರ್ ವರದಿ ಮಾಡುತ್ತಾರೆ. ಅವರು ಹೇಳುತ್ತಾರೆ: ಉಹುದಿನ ದಿನದಂದು ನಾನು ಸ್ವತಃ ನೋಡಿದ್ದೇನೆ. ನಾನು ಬಾಣಗಳನ್ನು ಚಲಾಯಿಸುತ್ತಿದ್ದೆ. ಆ ಬಾಣಗಳನ್ನು ನನ್ನ ಬಳಿಗೆ ಬಿಳಿ ವಸ್ತ್ರ ಧರಿಸಿದ ಸುಂದರ ವ್ಯಕ್ತಿ ಮರಳಿ ತರುತ್ತಿದ್ದರು. ನನಗೆ ಅವರ ಪರಿಚಯವಿರಲಿಲ್ಲ. ಅನಂತರ ಅವರು ದೇವದೂತರಾಗಿದ್ದರು ಎಂದು ನಾನು ಅನುಮಾನಿಸಿದೆ.

ಒಂದು ಖುತ್ಬದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬೀಅ್(ರಹ್ಮಹುಲ್ಲಾಹ್) ಸಹ ಈ ಘಟನೆಯನ್ನು ವಿವರಿಸಿರುವರು. ಸಹಾಬಿಯರು ಹೇಳುತ್ತಾರೆ: ಬದ್ರ್ ಯುದ್ಧದಲ್ಲಿ ದೇವದೂತರನ್ನು ನೋಡಲಾದಾಗ ಅವರ ತಲೆಗಳಲ್ಲಿ ಕಪ್ಪು ಮುಂಡಾಸುಗಳಿದ್ದುವು ಮತ್ತು ಅವರಿಗೆ ಒಂದು ಸಮವಸ್ತ್ರವಿತ್ತು. ಆದರೆ ಹಝ್ರತ್ ಪೈಗಂಬರ್(ಸ) **'ಮುಸವ್ವಿಮೀನ್'**ಗೆ ನೀಡಿದ ವ್ಯಾಖ್ಯಾನವು ಹಾಗೆಯೇ ನಡೆಯಿತು. ಅದೇ ರೀತಿಯಲ್ಲಿ ಉಹುದ್ ಯುದ್ಧದಲ್ಲಿ ಕಾಣಲ್ಪಟ್ಟ ದೇವದೂತರ ತಲೆಗಳಲ್ಲಿ ಕೆಂಪು ಮುಂಡಾಸುಗಳಿದ್ದುವು. ಕೆಂಪು ಬಣ್ಣದಲ್ಲಿ ಸ್ವಲ್ಪ ದುಃಖದ ಸಂದೇಶ ಕೂಡ ಇತ್ತು. ಏಕೆಂದರೆ ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಉಂಟಾದ ಗಾಯಗಳಿಂದ ಸಹಾಬಿಯರಿಗೆ ಉಂಟಾದಂತಹ ದುಃಖವು ಹಝ್ರತ್ ಪೈಗಂಬರ್(ಸ)ರ ಪೂರ್ತಿ ಜೀವಿತದಲ್ಲಿ ಸಹಾಬಿಯರಿಗೆ ಎಂದಿಗೂ ಉಂಟಾಗಿರಲಿಲ್ಲ. ಒಂದು ದುಃಖದ ನಂತರ ಮತ್ತೊಂದು ದುಃಖದ ವಾರ್ತೆ ಅವರಿಗೆ ಲಭಿಸುತ್ತಿತ್ತು. ಅವರು ದುಃಖಗಳಿಂದ ಸುಸ್ತಾದರು. ಒಟ್ಟಿನಲ್ಲಿ ಈ ಯುದ್ಧದಲ್ಲಿ ದೇವದೂತರ ಕುರುಹಾಗಿಯೂ ದುಃಖ ಮತ್ತು ರಕ್ತದ ಬಗ್ಗೆ ಪತ್ತೆ ನೀಡುವ ಬಣ್ಣವನ್ನು ಆಯ್ಕೆ ಮಾಡಲಾಗಿತ್ತು.

ಯಾವ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಗಾಗಿ ಸಹಾಬಿಯರು ಸ್ಥಿರಚಿತ್ತರಾಗಿದ್ದರು ಮತ್ತು ತಮ್ಮ ಜೀವಗಳನ್ನು ತ್ಯಾಗ ಮಾಡಿದ್ದರು ಎಂಬುದರ ಅನೇಕ ಘಟನೆಗಳಿವೆ. ಹಝ್ರತ್ ಮಿರ್ಝ಼ಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಕುರಿತು ಬರೆಯುತ್ತಾರೆ: ಆ ಸಮಯದಲ್ಲಿ ಅತ್ಯಂತ ಅಪಾಯಕಾರಿಯಾದ ಯುದ್ಧ ನಡೆಯುತ್ತಿತ್ತು. ಮುಸ್ಲಿಮರಿಗೆ ಒಂದು ಅತ್ಯಂತ ಕಠಿಣ ಆಪತ್ತು ಮತ್ತು ಪರೀಕ್ಷೆಯ ಸಮಯವಾಗಿತ್ತು. ಹಝ್ರತ್ ಪೈಗಂಬರ್(ಸ)ರ ಶಹಾದತಿನ ಸುದ್ದಿ ಕೇಳಿ ಅನೇಕ ಸಹಾಬಿಯರು ಧೈರ್ಯಗುಂದಿದ್ದರು ಮತ್ತು ಅವರು ಆಯುಧಗಳನ್ನು ಎಸೆದು ಒಂದು ಬದಿಗೆ ಸರಿದಿದ್ದರು. ಅವರಲ್ಲಿ ಹಝ್ರತ್ ಉಮರ್(ರ) ಕೂಡ ಇದ್ದರು. ಹೀಗೆ ಈ ಜನರು ಅದೇ ರೀತಿಯಲ್ಲಿ ಒಂದು ಬದಿಯಲ್ಲಿ ಕುಳಿತಿದ್ದರು. ಅಲ್ಲಿಗೆ ಒಬ್ಬ ಸಹಾಬಿ ಅನಸ್ ಬಿನ್ ನಝ್ರ್ ಅನ್ಸಾರೀ(ರ) ಬಂದು ಅವರನ್ನು ನೋಡಿ ಹೀಗೆ ಹೇಳಿದರು: ನೀವು ಇಲ್ಲಿ ಏನು ಮಾಡುತ್ತಿದ್ದೀರಿ? ಅವರು ಹೇಳಿದರು: ಹಝ್ರತ್ ಪೈಗಂಬರ್(ಸ) ಶಹೀದ್ ಆಗಿರುವರು. ಈಗ ಯುದ್ಧ ಮಾಡುವುದರಿಂದ

ಪ್ರಯೋಜನವೇನು? ಅನಸ್(ರ) ಹೇಳಿದರು: ಇದೇ ಹೋರಾಡಬೇಕಾದ ಸಮಯ. ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದ ಮರಣ ನಮಗೂ ಲಭಿಸಲಿ. ಹಝ್ರತ್ ಪೈಗಂಬರ್(ಸ)ರ ನಂತರ ಜೀವಿಸುವುದರಿಂದ ಯಾವ ಆನಂದ ಲಭಿಸಲು ಸಾಧ್ಯ? ಆಗ ಅಲ್ಲಿಗೆ ಸಅದ್ ಬಿನ್ ಮುಆಧ್(ರ) ಬಂದರು. ಅನಸ್ ಹೇಳಿದರು: ಹೇ ಸಅದ್, ನನಗೆ ಆ ಪರ್ವತದಿಂದ ಸ್ವರ್ಗದ ಸುಗಂಧ ಬರುತ್ತಿದೆ. ಹೀಗೆ ಹೇಳಿ ಅನಸ್(ರ) ಶತ್ರುಗಳ ಪಂಕ್ತಿಗಳಿಗೆ ನುಗ್ಗಿದರು ಮತ್ತು ಹೋರಾಡುತ್ತಾ ಶಹೀದ್ ಆದರು. ಯುದ್ಧದ ನಂತರ ನೋಡಿದಾಗ ಅವರ ದೇಹದಲ್ಲಿ ಎಂಬತ್ತಕ್ಕೂ ಹೆಚ್ಚಿನ ಗಾಯಗಳಿದ್ದುವು. ಅದು ಯಾರ ಮೃತದೇಹವೆಂದು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಕೊನೆಗೆ ಅವರ ಸಹೋದರಿ ಅವರ ಬೆರಳನ್ನು ನೋಡಿ ಗುರುತಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಕೂಡ ಅವರ ಶಹಾದತಿನ ಪ್ರಸ್ತಾಪ ಮಾಡಿರುವರು: ಉಹುದ್ ಯುದ್ಧದಲ್ಲಿ ಅಲ್ಲಾಹನು ಪುನಃ ಮುಸ್ಲಿಮರಿಗೆ ವಿಜಯ ನೀಡಿದಾಗ ಮಾಲಿಕ್ ಬಿನ್ ಅನಸ್(ರ)ರನ್ನು ಹುಡುಕಲು ಹಝ್ರತ್ ಪೈಗಂಬರ್(ಸ) ಹೇಳಿದರು. ಆಗ ಅವರ ಸಹೋದರಿ ಒಂದು ಜಾಗದಲ್ಲಿ ಒಂದು ಮೃತದೇಹದ ಒಂದು ಬೆರಳಿನ ಮೂಲಕ ಅವರನ್ನು ಗುರುತಿಸಿ ಹಝ್ರತ್ ಪೈಗಂಬರ್(ಸ)ರಿಗೆ ಸುದ್ದಿ ಮುಟ್ಟಿಸಿದರು. ಇದಾಗಿತ್ತು ಸಹಾಬಿಯರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಪ್ರೇಮ. ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

(ಅನಂತರ ಹುಝೂರ್ ಹೇಳಿದರು:) ದುಆಗಳಲ್ಲಿ ಯಮನಿನ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅವರು ಇತ್ತೀಚೆಗೆ ಸಾಕಷ್ಟು ಕಷ್ಟತೆಗಳಲ್ಲಿ ಸಿಲುಕಿರುವರು. ಅದೇ ರೀತಿಯಲ್ಲಿ ಮುಸ್ಲಿಂ ಸಮುದಾಯಕ್ಕಾಗಿ ದುಆ ಮಾಡಿರಿ. ಅಲ್ಲಾಹನು ಅವರಲ್ಲೂ ಒಗ್ಗಟ್ಟು ಮತ್ತು ಐಕ್ಯವನ್ನು ಉಂಟುಮಾಡಲಿ ಹಾಗೂ ಅವರಿಗೆ ಬುದ್ಧಿ ಮತ್ತು ವಿವೇಕವನ್ನು ದಯಪಾಲಿಸಲಿ. ಲೋಕದ ಒಟ್ಟಾರೆ ಸ್ಥಿತಿಗತಿಗಳಿಗೆ ಸಂಬಂಧಿಸಿಯೂ ದುಆ ಮಾಡಿರಿ. ಲೋಕವು ಬಹಳ ವೇಗವಾಗಿ ಯುದ್ಧದ ಕಡೆಗೆ ಧಾವಿಸುತ್ತಿದೆ. ಅಲ್ಲಾಹನು ಕೃಪೆದೋರಲಿ.

ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ಼ ಗ಼ಾಯಿಬ್ ನಿರ್ವಹಿಸುವುದಾಗಿ ಘೋಷಿಸಿದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ ಎಂದು ಹುಝೂರ್ ದುಆ ಮಾಡಿದರು.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*(atba)**

*At, **'Masjid Mubarak',** Islamabad, Tilford, UK.* On 26-01-2024

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon